
ಪ್ರೀತಿಯಿಂದ ನೋಡುತ್ತಿದ್ದರು. ನಾನು ಅಂಥ ಧೈರ್ಯಶಾಲಿ, ನಿಸ್ಸಂಕೋಚ ಮತ್ತು ಕಟುವಾಗಿ ಮಾತನಾಡುವವನನ್ನು ಬೇರೆಲ್ಲೂ ನೋಡಲಿಲ್ಲ. ಅವನು ಅದೊಂದು ದಿನ ಹೇಳಿದ್ದ, 'ಚಿಕ್ಕಪ್ಪ, ನಾನು ಒಂಟಿಯಾಗಿ ಹೋರಾಡಿದ್ದೇನೆ. ಪ್ರತಿ ಸಲವೂ ಹೊಡೆತ ತಿಂದಿದ್ದೇನೆ, ಪ್ರತಿ ಸಲವೂ ಸೋತಿದ್ದೇನೆ. ಈಗ ಎಲ್ಲರೊಂದಿಗೆ ಕಲೆತು, ಬೇವರ್ಸಿಗಳಲ್ಲಿ ಎಷ್ಟು ಶಕ್ತಿಯಿದೆ ಎಂಬುದನ್ನು ನೋಡುತ್ತೇನೆ.'



ಈ ದಿನಗಳಲ್ಲಿಯೇ ಘಟನೆಯೊಂದು ಘಟಿಸಿತು. ಜಪಾನ್ ನಮ್ಮ ಕಾರ್ಖಾನೆಗಳಿಂದ ಲೋಹ ಖರೀದಿಸುವುದನ್ನು ನಿಲ್ಲಿಸಿತು. ಇದರಿಂದಾಗಿ ಸರ್ಕಾರದಿಂದ, ಇನ್ನು ನಮಗೆ ಕಚ್ಚಾ ಲೋಹದ ಉತ್ಪಾದನೆಯನ್ನು ನಿಲ್ಲಿಸಬೇಕು ಎಂದು ಆದೇಶ ಬಂತು. ಕೂಲಿಕಾರರನ್ನು ಅಧಿಕ ಸಂಖ್ಯೆಯಲ್ಲಿ ಕೆಲಸದಿಂದ ತೆಗೆದುಹಾಕುವಂತೆ ಸರ್ಕಾರಿ ಆದೇಶ ಜಾರಿಯಾಯಿತು. ಕೂಲಿಕಾರರು, ಮೊದಲು ನಮ್ಮ ನೌಕರಿಗೆ ಬದಲಿ ವ್ಯವಸ್ಥೆ ಮಾಡಿ, ನಂತರ ನಮ್ಮನ್ನು ತೆಗೆಯಲಿ ಎಂದು ಬೇಡಿಕೆಯಿಟ್ಟರು. ಈ ಬೇಡಿಕೆಗೆ ಗಮನ ಕೊಡದೆ ಮ್ಯಾನೇಜಮೆಂಟ್ ಕೆಲಸದಿಂದ ತೆಗೆದು ಹಾಕುವ ಪ್ರಕ್ರಿಯೆಯನ್ನು ತಕ್ಷಣದಿಂದ ಕಾರ್ಯರೂಪಕ್ಕಿಳಿಸಲು ಆರಂಭಿಸಿತು. ಮಜದೂರ್ ಯೂನಿಯನ್ ಇದನ್ನು ವಿರೋಧಿಸಿ ಹರತಾಳವನ್ನು ಘೋಷಿಸಿತು. ಕೂಲಿಕಾರರು ತಮ್ಮ ಬಿಡಾರಗಳಲ್ಲಿ ಕೂತರು. ಕೆಲಸಕ್ಕೆ ಯಾರೂ ಹಾಜರಾಗಲಿಲ್ಲ.

ಪೊಲೀಸರು ಬಂದು ಸುತ್ತಮುತ್ತ ಜಮಾಯಿಸಿದರು. ಕೆಲವು ಸೈನಿಕರನ್ನೂ ಗಸ್ತಿಗೆ ಕರೆಸಲಾಯಿತು; ಅವರು ಎಲ್ಲೆಡೆಗಳಲ್ಲಿ ಅಡ್ಡಾಡಿ ಪರಿಸ್ಥಿತಿಯನ್ನು ನಾಯಿಗಳಂತೆ ಮೂಸುವ ಕೆಲಸ ಮಾಡುತ್ತಿದ್ದರು. ಆ ದಿನಗಳಲ್ಲಿ ನನ್ನ ಮತ್ತು ಟೇಪಚೂನ ಭೇಟಿ, ಶೇರೆ ಪಂಜಾಬ್ ಹೊಟೇಲ್ ಎದುರಿಗಿದ್ದ ಮರದ ಬೆಂಚಿನಲ್ಲಾಯಿತು. ಬೀಡಿ ಸೇದುತ್ತಿದ್ದ ಅವನು ಕಪ್ಪು ಬಣ್ಣದ ಚೆಡ್ಡಿಯ ಮೇಲೆ ಖಾದಿಯ ಅಂಗಿಯನ್ನು ತೊಟ್ಟಿದ್ದ.

ಅವನು ನನ್ನನ್ನು ನೋಡಿ ಮುಗುಳ್ನಗುತ್ತಾ ಹೇಳಿದ, 'ನಮಸ್ಕಾರ ಚಿಕ್ಕಪ್ಪ, ಕೆಂಪು ನಮಸ್ಕಾರ.' ನಂತರ ಅವನು ವೀಳ್ಯ-ಸುಣ್ಣದಿಂದ ಕೊಳಕಾದ ಹಲ್ಲುಗಳನ್ನು ತೋರ್ಪಡಿಸುತ್ತಾ ನಕ್ಕ, 'ಮ್ಯಾನೇಜ್‌ಮೆಂಟಿನ ಅಂಡಿಗೆ ನಾವು ದಪ್ಪ ದೊಣ್ಣೆಯನ್ನು ತೂರಿಸಿದ್ದೇವೆ. ಬೇವರ್ಸಿಗಳು ಒದ್ದಾಡುತ್ತಿದ್ದಾರೆ. ಆದರೆ, ಚಿಕ್ಕಪ್ಪ ಅದನ್ನು ಹೊರಗೆ ತೆಗೆಯಲಾಗುತ್ತಿಲ್ಲ. ಹತ್ತು ಸಾವಿರ ಕೂಲಿಗಾರರನ್ನು ಉಪವಾಸಕ್ಕೆ ತಳ್ಳಿ ದನಗಳಂತೆ ಓಡಿಸುವುದು ಹುಡುಗಾಟದ ಕೆಲಸವಲ್ಲ. ಮೇಲಿನ ಹೆಸರಿನಿಂದ ಕೆಲಸದಿಂದ ತೆಗೆಯಬೇಕು. ಯಾರು ಐವತ್ತು ಕೂಲಿಕಾರರಿಗೆ ಸಮನಾದ ಸಂಬಳವನ್ನು ತೆಗೆದುಕೊಳ್ಳುವರೋ, ಅವರನ್ನು ಮೊದಲು ತೆಗೆಯಬೇಕು, ಸೂಪರ್‌ವೈಸರನನ್ನು ಮೊದಲು ತೆಗೆಯಲಿ.'

ಟೇಪಚೂ ತುಂಬಾ ಬದಲಾಗಿದ್ದ. ನಾನು ಅವನನ್ನು ಗಮನವಿಟ್ಟು ನೋಡಿದೆ. ಅವನ ನಗುವಿನ ಹಿಂದೆ ಜುಗುಪ್ಸೆ, ದ್ವೇಷ ಮತ್ತು ಸಿಟ್ಟಿನ ವಿಶಾಲ ಸಮುದ್ರದ ಅಲೆಗಳು ಬಂದು ತೀರಕ್ಕೆ ಅಪ್ಪಳಿಸುತ್ತಿದ್ದವು. ಅವನ ಎದೆಯ ಮೇಲಿನ ಅಂಗಿ ತೆರೆದುಕೊಂಡಿತ್ತು. ಅಂಗಿಯ ಗುಂಡಿಗಳು ಮುರಿದು ಹೋಗಿದ್ದವು. ಕಾರ್ಖಾನೆಯ ವಿಶಾಲ ದ್ವಾರಗಳಂತೆ ತೆರೆದ ಅಂಗಿಯ ಕತ್ತಿನ ಒಳಗೆ ಅವನ ಎದೆಯ ಕೂದಲುಗಳು ಅಲುಗಾಡುತ್ತಿದ್ದವು. ಅಸಂಖ್ಯ ಕೂಲಿಕಾರರಂತೆ, ಕಾರ್ಖಾನೆಯ ಮುಖ್ಯ ದ್ವಾರದಲ್ಲಿ ಕೂತಿದ್ದ ಟೇಪಚೂ, ತನ್ನ ಹೆಗಲ ಮೇಲೆ